2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.168-2019

ದೋ.ಸಾ. 1

ಫ್ರಾ.ಸಾ. 1

ಪ್ರ.ವ.ಬೊ.ದಿನಾಂಕ. 18-07-2026

| | | |
|---|---|---|
| ಹೆಸರು | - | ರತ್ನಮ್ಮ |
| ಗಂಡನ ಹೆಸರು | - | ಕೇಶವರಾವ್ |
| ವಯಸ್ಸು | - | 60 ವರ್ಷ |
| ಉದ್ಯೋಗ | - | ಗೃಹಿಣಿ |
| ವಾಸ ಸ್ಥಳ | - | ದೊಡ್ಡ ಬಾತಿ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ನನಗೆ ಇಬ್ಬರು ಮಕ್ಕಳು. ಅವರು ಶ್ರೀನಿವಾಸ ಮತ್ತು ವಿಠಲ. ವಿಠಲ ಹಿರಿಯ ಮಗ. ಶ್ರೀನಿವಾಸ ಕಿರಿಯ ಮಗ. ವಿಠಲ ಗೌಂಡಿ ಕೆಲಸ ಮಾಡುತ್ತಿದ್ದನು. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತಳ ಪರಿಚಯ ಇರುತ್ತದೆ. ಶ್ರೀನಿವಾಸ ಬೆಂಗಳೂರಿನಲ್ಲಿ ಅಮ್ಮ ಕಾಲೇಜ್ ನಲ್ಲಿ 8-10 ವರ್ಷಗಳಿಂದ ಕೆಲಸ ಮಾಡುತ್ತಿದ್ದನು. ಆರೋಪಿ ನಮ್ಮ ಊರಿನವಳು. ಅವಳನ್ನು ನಾನು ಗುರುತಿಸುತ್ತೇನೆ.

2. ಶ್ರೀನಿವಾಸ ಬೆಂಗಳೂರಿಗೆ ಹೋಗುವುದಕ್ಕಿಂತ ಮುಂಚೆ ಬಾತಿಯಲ್ಲಿಯೇ ವಾಸವಾಗಿದ್ದನು. ಆತ ಬಾತಿಯಲ್ಲಿ ಇದ್ದಾಗ ಆರೋಪಿಯೊಂದಿಗೆ ಸಂಬಂಧ ಇತ್ತು. ಬೆಂಗಳೂರಿನಿಂದ ಶ್ರೀನಿವಾಸ 15-20 ದಿನಕ್ಕೊಮ್ಮೆ ಬರುತ್ತ ಇದ್ದ. ಬೆಳಿಗ್ಗೆ ನಮ್ಮ ಮನೆಯಲ್ಲಿ ಇರುತ್ತಿದ್ದ ಹಾಗೂ ರಾತ್ರಿ ಆರೋಪಿಯ ಮನೆಗೆ ಹೋಗುತ್ತಿದ್ದ.

3. ಈಗ 7-8 ವರ್ಷಗಳ ಹಿಂದೆ ನನ್ನ ಮಗ ಶ್ರೀನಿವಾಸ ಬಂದು ನಮ್ಮ ಮನೆಯಲ್ಲಿ ಇದ್ದನು. ಆಮೇಲೆ ಆರೋಪಿತಳು ಕರೆ ಕಳುಹಿಸಿದಳು. ಹೀಗಾಗಿ ಆತನು ಅವಳ ಮನೆಗೆ ಹೋದನು. ನಂತರ ನಾನು ರಾತ್ರಿ 8-00 ರಿಂದ 8-30 ಸುಮಾರಿಗೆ ಆರೋಪಿಯ ಮನೆಗೆ ಕರೆಯಲು ಹೋದೆನು. ನಾನು ಆರೋಪಿಯ ಮನೆಯ ಹೊರಗಡೆ ನಿಂತು ನನ್ನ ಮಗನನ್ನು ಕರೆದಾಗ ಒಳಗೆ ಜಗಳ ನಡೆಯುತ್ತ ಇತ್ತು, ನಾನು ಕರೆದಾಗ ಬೇಗ ಬರಲಿಲ್ಲ. ಆಮೇಲೆ ಆರೋಪಿ ಅವನು ಇಲ್ಲ ಎಂದು ಹೇಳಿ ಬಾಗಿಲು ಮುಚ್ಚಿಕೊಂಡು ಹೋದಳು. ನಂತರ ಮತ್ತೆ ನಾನು ಕರೆದಾಗ ಅಮ್ಮ ಎಂದು ನನ್ನ ಮಗ ಬಂದನು.

4. ನಾನು ಶ್ರೀನಿವಾಸನನ್ನು ಮನೆಗೆ ಕರೆದುಕೊಂಡು ಬಂದೆನು. ಆರೋಪಿತಳು ಮೇಲಿಂದ ಮೇಲೆ ಆತನಿಗೆ ಪೋನ್ ಮಾಡಲು ಪ್ರಾರಂಭಿಸಿದಳು. ಸುಮಾರು 9-30 ಗೆ ಪೋನ್ ಸ್ವಿಚ್ ಆಪ್ ಮಾಡಿ ಆರೋಪಿ ಮನೆಗೆ ನಾನು ಬೇಡ ಎಂದರು ನನ್ನ ಮಗ ಶ್ರೀನಿವಾಸ ಹೋದನು.

5. ನಾನು ಬೆಳಿಗ್ಗೆ 1-30 ಗಂಟೆಗೆ ಆರೋಪಿ ಮನೆಗೆ ಹೋದಾಗ ಅಲ್ಲಿ ಯಾರು ಇರಲಿಲ್ಲ, ನನ್ನ ಮಗನ ಹೆಣ ರಕ್ತದ ಮಡುವಿನಲ್ಲಿ ಬಿದ್ದಿತ್ತು. (ಸಾಕ್ಷಿ ಹೇಳುತ್ತ ಅಳಲು ಪ್ರಾರಂಭಿಸುತ್ತಾರೆ.)

6. ಅಲ್ಲಿ ಒಂದು ಚಾಕು, ಬಾಗಿಲಿನ ಒಂದು ರಿಪೀಸು ಬಿದ್ದಿದ್ದವು. ನನ್ನ ಮಗ ಜೀವಂತ ಇರಲಿಲ್ಲ. ಆತನ ಕೊಲೆಯಾಗಿತ್ತು. ನಂತರ ನಾನು ಊರಲ್ಲಿ ತಿಳಿಸಿದೆ, ಅವರೆಲ್ಲ ಬಂದು ನಂತರ ಪೊಲೀಸ್ ಠಾಣೆಗೆ ಹೋಗಿ ಕಂಪ್ಲೆಂಟ್ ಕೊಟ್ಟೆನು. ಈಗ ನೋಡುತ್ತಿರುವ ಕಂಪ್ಲೆಂಟ್ ನಾನು ನೀಡಿದ್ದು, ಅದನ್ನು ನಿ.ಪಿ.1 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಶ್ರೀನಿವಾಸ ಈತನು ಬೆಂಗಳೂರಿನಲ್ಲಿ ಮದುವೆಯಾಗಿದ್ದನು ಹಾಗೂ ಆತನಿಗೆ ಒಂದು ಮಗು ಸಹ ಇದೆ.

7. ನನ್ನ ಮಗನ ತಲೆಯ ಮೇಲೆ ನಾಲ್ಕೈದು ಗಾಯಗಳಾಗಿದ್ದವು ಹಾಗುಾ ಚಾಕುವನ್ನು ಕುತ್ತಿಗೆ ಭಾಗಕ್ಕೆ ಇರಿಯಲಾಗಿತ್ತು. ಕಣ್ಣಿಗೆ ಗಾಯಗಳಾಗಿದ್ದವು. ಮರ್ಮಾಂಗವನ್ನು ಕತ್ತರಿಸಿದ್ದರು.

8. ಅಲ್ಲಿ ಹಾಲೇಶ್ ಮತ್ತು ರಾಮಣ್ಣ ಇದ್ದರು. ನಂತರ ಪೋಲೀಸರು ಪೋಟೋ ತೆಗೆದುಕೊಂಡು 2-30 ಅಷ್ಟೊತ್ತಿಗೆ ಆಸ್ಪತ್ರೆಗೆ ಶವ ಸಾಗಿಸಿದರು. ನಂತರ ಮರುದಿನ ನಮಗೆ ಬಾಡಿ ಕೊಟ್ಟರು. ಆ ರೂಮಿನಲ್ಲಿ ರಕ್ತ ಸಿಡಿದಿತ್ತು. ಚಾಪೆಯ ಮೇಲೆ ಹಾಗೂ ಇನ್ನಿತರ ವಸ್ತುಗಳು ರಕ್ತ ಸಿಕ್ತವಾಗಿದ್ದವು. ಪೋಲೀಸರು ಅಲ್ಲಿ ಇದ್ದ ವಸ್ತುಗಳನ್ನು ತೆಗೆದುಕೊಂಡು ಹೋದರು. ಈಗ ತೋರಿಸುತ್ತಿರುವ ಪೋಟೋದಲ್ಲಿ ನಿಂತಿದ್ದು ಹಾಗೂ ನನ್ನ ಮಗನ ಹೆಣ ಕಾಣುತ್ತಿದೆ. ಅವುಗಳನ್ನು ನಿ.ಪಿ.2 ಮತ್ತು 3 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ಪೋಟೋಗಳಲ್ಲಿ ನನ್ನ ಮಗನ ಹೆಣ ಹಾಗೂ ಸೂಟ್ ಕೇಸ್ ಗಳು ಕಾಣುತ್ತಿವೆ. ಅವುಗಳನ್ನು ಕ್ರಮವಾಗಿ ನಿ.ಪಿ.4 ರಿಂದ 13 ಎಂದು ಗುರುತಿಸಲಾಯಿತು. ಸಾಕ್ಷಿಯು ಪೋಟೋಗಳಲ್ಲಿ ಕಾಣಿಸುತ್ತಿರುವ ಸೂಟ್ ಕೇಸನ್ನು ನೋಡಿ ಆರೋಪಿ ನನ್ನ ಮಗನ ಹೆಣವನ್ನು ಕತ್ತರಿಸಿ ಪೀಸ್ ಮಾಡಿ ಆ ಸೂಟ್ ಕೇಸ್ ನಲ್ಲಿ ತುಂಬಿಕೊಳ್ಳಬೇಕು ಎಂದು ವಂಚು ಹಾಕಿದ್ದಳು. ಆಗ ಎಲೆಕ್ಷನ್ ಇದ್ದುದರಿಂದ ಅದು ಆಗಿರಲಿಲ್ಲ.

9. ಈಗ ತೋರಿಸುತ್ತಿರುವ ಮರದ ರಿಪೀಸ್ ಮತ್ತು ಚಾಕು ಆ ದಿನ ಅಲ್ಲಿ ಇದ್ದ ವಸ್ತುಗಳಾಗಿರುತ್ತವೆ. ಅವುಗಳನ್ನು ನಿ.ಪಿ.14 ಮತ್ತು 15 ಎಂದು ಗುರುತಿಸಲಾಯಿತು.

10. ಈಗ ಸದರಿ ಚಾಕುವನ್ನು ಸೀಲ್ಡ ಚೀಲದಿಂದ ಓಪನ್ ಮಾಡಿ ಸಾಕ್ಷಿಗೆ ತೋರಿಸಿದಾಗ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಚಾಕುವನ್ನು ಮು.ಮಾ.1 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ರಿಪೀಸನ್ನು ಚೀಲದಿಂದ ಓಪನ್ ಮಾಡಲಾಗಿ ಅದನ್ನು ನೋಡಿ ಸಾಕ್ಷಿಯು ಅಲ್ಲಿ ಇರುವ ರಿಪೀಸ್ ಅದೇ ಎನ್ನುತ್ತಾರೆ. ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು.

11. ಈಗ ನೋಡುತ್ತಿರುವ ಚಾಪೆ ಆ ದಿನ ಇದ್ದು, ಅದರ ಮೇಲೆ ನನ್ನ ಮಗನ ಹೆಣ ಇತ್ತು. ಆ ಚಾಪೆಯನ್ನು ಮು.ಮಾ.3 ಎಂದು ಗುರುತಿಸಲಾಯಿತು. ಆ ಚಾಪೆಯ ಮೇಲೆ ಸಹ ರಕ್ತದ ಕಲೆಗಳು ಇವೆ.

12. ಈಗ ನೋಡುತ್ತಿರುವ ದಿಂಬು ಆ ದಿನ ಇದ್ದು, ಆ ದಿಂಬನ್ನು ಮು.ಮಾ.4 ಎಂದು ಗುರುತಿಸಲಾಯಿತು. ಆ ದಿಂಬಿನ ಮೇಲೆ ಸಹ ರಕ್ತದ ಕಲೆಗಳು ಇವೆ.

13. ಈಗ ನೋಡುತ್ತಿರುವ ಚೂಡಿದಾರದ ವೇಲ್ ಆ ದಿನ ರಕ್ತದ ಮಡುವಿನಲ್ಲಿ ಬಿದ್ದಿದ್ದು, ಅದನ್ನು ನಾನು ಗುರುತಿಸುತ್ತೇನೆ. ಅದನ್ನು ಮು.ಮಾ.5 ಎಂದು ಗುರುತಿಸಲಾಯಿತು.

14. ಈಗ ನೋಡುತ್ತಿರುವ ಟವಲ್ ಆ ದಿನ ಇದ್ದು, ಆ ಟವಲನ್ನು ಮು.ಮಾ.6 ಎಂದು ಗುರುತಿಸಲಾಯಿತು.

15. ಈಗ ನೋಡುತ್ತಿರುವ ಎರಡು ರಿಪೀಸ್ ಪಟ್ಟಿಗಳು ಆ ದಿನ ಇದ್ದು, ಅವುಗಳನ್ನು ಆ ದಿನ ನೋಡಿದ್ದು, ಅವುಗಳನ್ನು ಮು.ಮಾ.7 ಮತ್ತು 8 ಎಂದು ಗುರುತಿಸಲಾಯಿತು.

16. ಮಂಚದ ಮೇಲೆ ನನ್ನ ಮಗ ಕೈಯನ್ನು ಆಡಿಸಿದ್ದರಿಂದ ಮಂಚದ ಮೇಲೆಲ್ಲಾ ರಕ್ತದ ಕಲೆಗಳು ಬಿದ್ದಿತ್ತು. ಗೋಡೆಗೆ ಹತ್ತಿದ ರಕ್ತದ ಕಲೆಯ ಪೇಯಿಂಟ್ ಅದನ್ನು ಮು.ಮಾ.9 ಎಂದು ಗುರುತಿಸಲಾಯಿತು.

17. ಆ ದಿನ ನನ್ನ ಮಗ ಹಾಕಿಕೊಂಡಿರುವ ಬಟ್ಟೆಗಳು ರಕ್ತವಾಗಿದ್ದವು. ನಾನು ಆ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಒಂದು ಟೀಶರ್ಟ್, ನೈಟ್ ಪ್ಯಾಂಟ್, ಸ್ಯಾಂಡೋ ಬನಿಯನ್, ಒಂದು ಕಾಪಿ ಕಲರ್ ಡ್ರಾಯರ್, ಉಡಿದಾರ ಇದ್ದು, ಅವುಗಳನ್ನು ಕ್ರಮವಾಗಿ ಮು.ಮಾ.10 ರಿಂದ 15 ಎಂದು ಗುರುತಿಸಲಾಯಿತು.

18. ನನ್ನ ಮಗ ಬೇರೆ ಮದುವೆಯಾಗಿದ್ದ ಆ ಕಾರಣಕ್ಕೆ ಸಾಯಿಸಿರಬಹುದು. ನಾನು ಹೋದಾಗ ಗಲಾಟೆಯಾಗುತ್ತಿದ್ದು, ಅದು ಆರೋಪಿತಳು ಮನೆ ಮಾರಿ ಕೊಡು ಎಂದು ಹೇಳುತ್ತಿದ್ದಳು. ಪೋಲೀಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನನ್ನ ಮಗನ ಸಾವಿಗೆ ಆರೋಪಿಯೇ ಕಾರಣವಾಗಿರುತ್ತಾಳೆ.

**ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಕೆಎನ್ ಯು ವಕೀಲರಿಂದ.**

19. ನನ್ನ ಮಗ ಶ್ರೀನಿವಾಸ ಆರೋಪಿಯನ್ನು ಮದುವೆಯಾಗಿ 15 ವರ್ಷಗಳಾಗಿತ್ತು ಎಂಬುದು ನಿಜ. ಆರೋಪಿ ಮುಸ್ಲಿಂ ಜನಾಂಗಕ್ಕೆ ಸೇರಿದವಳು ಹಾಗೂ ನಾವು ಮರಾಠ ಜನಾಂಗಕ್ಕೆ ಸೇರಿದವರು. ನನ್ನ ಮಗ ಶ್ರೀನಿವಾಸ ಈತನು ನನ್ನ ಇಷ್ಟದ ವಿರುದ್ಧವಾಗಿ ಆರೋಪಿತಳನ್ನು ಮದುವೆಯಾಗಿದ್ದನು. ಶ್ರೀನಿವಾಸ ಬೆಂಗಳೂರಿಗೆ ದುಡಿಯಲು ಹೋದಾಗ ಹಂಪಮ್ಮ ಎಂಬುವವಳನ್ನು ಆರೋಪಿಗೆ ಗೊತ್ತಿಲ್ಲದೇ ಮದುವೆಯಾದ ಎಂಬುದು ನಿಜ. ನನ್ನ ಮಗ ಆರೋಪಿಯನ್ನು ಮದುವೆಯಾದ ನಂತರ ಮ್ಯಾರೇಜ್ ರೆಜಿಸ್ಟ್ರಾರ್ ಹತ್ತಿರ ತನ್ನ ಮದುವೆಯನ್ನು ರೆಜಿಸ್ಟಾರ್ ಮಾಡಿಸಿಕೊಂಡಿದ್ದ ಎಂಬುದು ಗೊತ್ತಿಲ್ಲ.

20. ಹಂಪಮ್ಮಳನ್ನು ನನ್ನ ಮಗ ಆರೋಪಿಗೆ ಗೊತ್ತಿಲ್ಲದಂತೆ ನನ್ನ ಮನೆ ದೊಡ್ಡಬಾತಿಗೆ ಕರೆದುಕೊಂಡು ಬರುತ್ತಿದ್ದ. ಹಂಪಮ್ಮ ನನಗೆ ಒಪ್ಪಿಗೆ ಇದ್ದು, ಅವಳನ್ನು ನನ್ನ ಸೊಸೆಯೆಂದು ಸ್ವೀಕರಿಸಿದ್ದೆ. ನನ್ನ ಮನೆಯಿಂದ ಬೈಕಿನಲ್ಲಿ

ಹಂಪಮ್ಮಳನ್ನು ನನ್ನ ಮಗ ಶ್ರೀನಿವಾಸ್ ಕೂರಿಸಿಕೊಂಡು ಕರೆದುಕೊಂಡು ಹೋಗುವಾಗ ಅದನ್ನು ಆರೋಪಿ ನೋಡಿ ಗಲಾಟೆ ಮಾಡಿದ್ದಳು ಎಂಬುದು ನಿಜ.

21. ನನಗೆ ಗೊತ್ತಿಲ್ಲದೇ ಮದುವೆಯಾಗಿದ್ದಾನೆಂದು ಶ್ರೀನಿವಾಸ್ ಮೇಲೆ ಆರೋಪಿ ಕಂಪ್ಲೆಂಟ್ ಮಾಡಿದ್ದಳು ಎಂಬುದು ಗೊತ್ತಿಲ್ಲ. ಆರೋಪಿಯನ್ನುಮದುವೆಯಾಗುವುದಕ್ಕಿಂತ ಮೊದಲು ಶ್ರೀನಿವಾಸ್ ಆರೋಪಿಗೆ ನೋಡಿಕೊಳ್ಳುವೆ ಎಂಬ ಭರವಸೆ ಕೊಟ್ಟ ಆಕೆಯ ಗಂಡನಿಂದ ಡೈವರ್ಸ್ ಮಾಡಿಸಿದ ಎಂದರೆ ಅವೆಲ್ಲಾ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿಯ ಮೊದಲನೇ ಗಂಡನ ಹೆಸರು ಹಬೀಬ್ ಶೇಕ್ ಎಂದು ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ ಹಾಗೂ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಒಬ್ಬಳು ಹೆಣ್ಣು ಮಗಳು ಇದ್ದುದು ಗೊತ್ತಿದೆ ಎನ್ನುತ್ತಾರೆ.

22. ನಾನು ಆರೋಪಿಗೆ ಮೊದಲನೇ ಗಂಡ ಇದ್ದಾನೆ, ಮಗಳು ಇದ್ದಾಳೆ, ಇಂತವಳನ್ನು ಯಾಕೆ ಮದುವೆಯಾದೆ ಎಂದು ನಾನು ಗೊತ್ತಾದ ನಂತರ ಶ್ರೀನಿವಾಸನಿಗೆ ಬೈಯುತ್ತಲಿದ್ದೆ ಎಂಬುದು ನಿಜ.

23. ನಿ.ಪಿ.1 ರಲ್ಲಿ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರವನ್ನು ಹೇಳಿ ಬರೆಸಿದ್ದೇನೆ. ನಮ್ಮ ಮನೆಯಿಂದ ಆರೋಪಿಯ ಮನೆ ಎರಡು ಲೈನ್ ಬಿಟ್ಟು ಇದೆ. ಆರೋಪಿಯ ಮನೆಯಲ್ಲಿ ಆಕೆಯ ತಾಯಿ, ತಮ್ಮ, ಅಕ್ಕತಂಗಿಯರು ಇರುತ್ತಿದ್ದರು ಎಂಬುದು ಸುಳ್ಳು, ಮಗಳು ಇರುತ್ತಿದ್ದಳು. ಆರೋಪಿಯು ಹೊಲಿಗೆ ಕೆಲಸ ಮಾಡುತ್ತಿದ್ದಳು ಹಾಗೂ ಗಾರ್ಮೆಂಟ್ಸ್ ಕೆಲಸ ಮಾಡುತ್ತಿದ್ದಳು. ಆರೋಪಿಯ ಮನೆಯ ಸುತ್ತ ಮುತ್ತ ಪಕ್ಕದಲ್ಲಿ ಮನೆಗಳು ಇದ್ದವು.

24. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಯಾರದೇ ಮನೆಯಲ್ಲಿ ಜಗಳವಾದರೆ ಜನರು ಗುಂಪುಗೂಡಿ ಬಂದು ನಿಂತು ನೋಡುತ್ತಾರೆ ಎಂಬುದು ನಿಜ. ಆರೋಪಿ ಇರುವ ಮನೆ ಅವಳ ಸ್ವಂತ ಮನೆ ಎಂದರೆ ಸಾಕ್ಷಿಯು ನನ್ನ ಮಗ ತಾನು ದುಡ್ಡು ಹಾಕಿದ್ದೆ ಎಂದು ಹೇಳುತ್ತಿದ್ದ ಎನ್ನುತ್ತಾರೆ. ಮೃತ ಶ್ರೀನಿವಾಸ್ ಕುಡಿಯುತ್ತಿದ್ದ ಎನ್ನುವುದು ಸುಳ್ಳು.

25. ನನ್ನ ಮಗ ಶ್ರೀನಿವಾಸ್ ಕುಡಿದು ಕುಡಿದು ಬೆಂಗಳೂರಿನಲ್ಲಿ ಬಹಳ ಸಾಲ ಮಾಡಿಕೊಂಡಿದ್ದ ಎನ್ನುವುದು ಸುಳ್ಳು. ನನ್ನ ಮಗ ನನ್ನ ಬಳಿ ಬಂದಾಗ ದುಡ್ಡು ಕೇಳಿದಾಗ ನಾನು ಜೋರು ಮಾಡಿ ಆರೋಪಿಯನ್ನು ಕಟ್ಟಿಕೊಂಡಿದ್ದೀಯಾ ಅವಳ ಬಳಿಯೇ ದುಡ್ಡು ಕೇಳು ಎಂದು ಕಳುಹಿಸುತ್ತಿದ್ದೆ ಎನ್ನುವುದು ಸುಳ್ಳು.

26. ಆ ದಿನ ಆರೋಪಿ ಮನೆಗೆ ನಾನು ಹೋಗಿ ನನ್ನ ಮಗನನ್ನು ಕರೆದಾಗ ಜಗಳವಾಗುತ್ತಿದ್ದುದನ್ನು ಕೇಳಿದ್ದು, ಆ ಕುರಿತಾಗಿ ನಿನ್ನ ಮಗ ನಿಮ್ಮ ಮನೆಗೆ ಬಂದ ಮೇಲೆ ಹೇಳಿದನಾ ಎಂದರೆ ಸಾಕ್ಷಿಯು ಆ ಕುರಿತಾಗಿ ಆತನು ಏನು ಹೇಳಲಿಲ್ಲ ಎನ್ನುತ್ತಾರೆ.

27. ಆರೋಪಿ ಮುಸ್ಲಿಂ ಜನಾಂಗದವಳಾಗಿದ್ದರಿಂದ ನನಗೆ ಅವಳನ್ನು ಕಂಡರೆ ಆಗಿಬರದೇ ಇದ್ದ ಕಾರಣ ನನ್ನ ಮಗನನ್ನು ಯಾರೋ ಕೊಲೆ ಮಾಡಿದ್ದನ್ನು, ಆರೋಪಿ ಮಾಡಿದ್ದಾಳೆ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ಈಗ ತೋರಿಸುತ್ತಿರುವ ರಿಪೀಸ್ (ಮು.ಮಾ.2) ಬಾಗಿಲಿನ ಚೌಕಟ್ಟಿನ ಭಾಗ ಎಂಬುದು ನಿಜ.

ಯಾವುದೋ ಹಳೆಯ ಬಾಗಿಲಿನ ಮುರಿದ ಚೌಕಟ್ಟಿನ ತುಂಡನ್ನು ನಾನು ತಂದು ಪೋಲೀಸರಿಗೆ ಕೊಟ್ಟಿದ್ದೇನೆ ಎಂಬುದು ಸುಳ್ಳು.

28. ಈಗ ತೋರಿಸುತ್ತಿರುವ ಚಾಕು (ಮು.ಮಾ.1) ತರಕಾರಿ ಹೆಚ್ಚುವ ಚಾಕು ಆಗಿದೆ. ಸಾಕಷ್ಟು ದೊರಕುತ್ತವೆ. ಚಾಪೆ, ದಿಂಬು ಹಾಗೂ ಇನ್ನಿತರ ಬಟ್ಟೆಗಳನ್ನು ನಮ್ಮ ಮನೆಯಿಂದಲೇ ಪೋಲೀಸರಿಗೆ ನಾನು ಕೊಟ್ಟಿದ್ದೇನೆ ಎಂಬುದು ಸುಳ್ಳು. ನನ್ನ ಮಗನ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸುಳ್ಳು. ಆರೋಪಿ ಮೇಲೆ ಸುಳ್ಳು ಕಂಪ್ಲೆಂಟ್ ಕೊಟ್ಟಿದ್ದೇನೆ ಎನ್ನುವುದು ಸುಳ್ಳು. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇಲನೆ ಎನ್ನುವುದು ಸುಳ್ಳು.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

(ಕೃಷ್ಣಮೂರ್ತಿ ಆರ್. ಪಡಸಲಗಿ)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.